ದೂರವಾಣಿ ಸಂಖ್ಯೆ: 080-23371691

**ಕರ್ನಾಟಕ ಸರ್ಕಾರ**

**(ವಿದ್ಯುತ್ ಪರಿವೀಕ್ಷಣಾಲಯ)**

ಸಂಖ್ಯೆ:ಮುವಿಪ/ಅಮುವಿಪ/ವಿಪ(ಪ)/ಅಧಿ/ /2022-23
01-38

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಿರ್ಮಾಣ ಭವನ, 2ನೇ ಮಹಡಿ,
ಡಾ|| ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು-560010

ದಿನಾಂಕ: 04/04/2022

## ಸುತ್ತೋಲೆ

ವಿಷಯ:ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿಶೇಷ ತಂತಿ ರಹದಾರಿ, ವಿದ್ಯುತ್ ಮೇಲ್ವಿಚಾರಕರ ರಹದಾರಿ ಮತ್ತು ತಂತಿ ಕೆಲಸಗಾರರ ರಹದಾರಿ ಹೊಸದು ಹಾಗೂ ನವೀಕರಣಕ್ಕೆ ಅರ್ಜಿಯಲ್ಲಿ ಜನ್ಮ ದಿನಾಂಕ ಹಾಗೂ ಹೆಸರು ಬದಲಾವಣೆ ಮಾಡಿಕೊಡುವ ಬಗ್ಗೆ.

**** **** ****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿಶೇಷ ತಂತಿ ಕೆಲಸಗಾರರ ರಹದಾರಿ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ರಹದಾರಿ ಹೊಂದಿರುವವರು ಅವರ ಪರವಾನಗಿ/ರಹದಾರಿಗೆ ಹೊಸದಾಗಿ ಅರ್ಜಿ ಸಲ್ಲಿಸುವಾಗ ಕಣ್‌ತಪ್ಪಿನಿಂದ ಅರ್ಜಿದಾರರ ಜನ್ಮ ದಿನಾಂಕ ಹಾಗೂ ಹೆಸರು ತಪ್ಪಾಗಿ ನಮೂದಿಸಿದ್ದು ಮತ್ತು ನವೀಕರಣ ಸಮಯದಲ್ಲಿ ಅರ್ಜಿದಾರರ ಜನ್ಮ ದಿನಾಂಕವನ್ನು ಆನ್‌ಲೈನ್‌ನಲ್ಲಿ ನಮೂದಿಸಿಲ್ಲದಿದ್ದರೆ, ಇಂತಹ ಬದಲಾವಣೆಗಳಿಗೆ ಸದ್ಯ ಕೇಂದ್ರ ಕಚೇರಿಗೆ ಅರ್ಜಿದಾರರು ಅರ್ಜಿ ಸಲ್ಲಿಸಿ ಬದಲಾವಣೆ ಮಾಡಿಸಿಕೊಳ್ಳುತ್ತಿರುತ್ತಾರೆ. ಮುಂದುವರೆದು, ಸದರಿ ಸೇವೆಗಳನ್ನು ಉಪ ವಿದ್ಯುತ್ ಪರಿವೀಕ್ಷಕರವರಿಗೆ ನೀಡಲು ಮುಖ್ಯ ವಿದ್ಯುತ್ ಪರಿವೀಕ್ಷಕರು(ಪ್ರಭಾರ) ತೀರ್ಮಾನಿಸಿರುತ್ತಾರೆ, ಆದ್ದರಿಂದ ಅರ್ಜಿದಾರರ ಜನ್ಮ ದಿನಾಂಕ ಹಾಗೂ ಹೆಸರನ್ನು ಸರಿಪಡಿಸಲು ಉಪ ವಿದ್ಯುತ್ ಪರಿವೀಕ್ಷಕರಿಗೆ ಈ ಮೂಲಕ ಅಧಿಕಾರ ಪ್ರತ್ಯಾಯೋಜಿಸಲಾಗಿದೆ, ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರವರುಗಳು **ದಿನಾಂಕ:04.04.2022** ರಿಂದ ಆನ್‌ಲೈನ್‌ನಲ್ಲಿ ಸದರಿ ಬದಲಾವಣೆಗಳನ್ನು ಮಾಡಬಹುದಾಗಿರುತ್ತದೆ.

ಜನ್ಮ ದಿನಾಂಕ ಹಾಗೂ ಹೆಸರನ್ನು ಸರಿಪಡಿಸಲು ಉಪ ವಿದ್ಯುತ್ ಪರಿವೀಕ್ಷಕರು **DEI ಆನ್‌ಲೈನ್ Portal ನಲ್ಲಿ Other→License/Permit Updation** ಮೆನುಗೆ ತೆರಳಿ **ಜನ್ಮ ದಿನಾಂಕ ಹಾಗೂ ಹೆಸರನ್ನು ಸರಿಪಡಿಸಬಹುದಾಗಿರುತ್ತದೆ**. ಜನ್ಮ ದಿನಾಂಕ ಹಾಗೂ ಹೆಸರನ್ನು ಸರಿಪಡಿಸಲು ತಮ್ಮ ಕಚೇರಿ ವ್ಯಾಪ್ತಿಗೆ ಸಂಬಂಧಪಟ್ಟ ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿಶೇಷ ತಂತಿ ಕೆಲಸಗಾರರ ರಹದಾರಿ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ರಹದಾರಿ ಹೊಂದಿರುವವರಿಂದ ಅರ್ಜಿ ಹಾಗೂ ಸೂಕ್ತ ದಾಖಲೆಗಳನ್ನು ಪಡೆದು, ಪರಿಶೀಲಿಸಿ ಜನ್ಮ ದಿನಾಂಕ ಹಾಗೂ ಹೆಸರನ್ನು ಸರಿಪಡಿಸಲು ಕ್ರಮಗೊಳ್ಳಲು ಈ ಮೂಲಕ ತಮ್ಮೆಲ್ಲರಿಗೆ ಸೂಚಿಸಿ ಸುತ್ತೋಲೆಯನ್ನು ಹೊರಡಿಸಲಾಗಿದೆ.

4/4/2022

ಮುಖ್ಯ ವಿದ್ಯುತ್ ಪರಿವೀಕ್ಷಕರು(ಪ್ರಭಾರ)

ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು,
ವಿದ್ಯುತ್ ಪರಿವೀಕ್ಷಣಾಲಯ,
ಬೆಂಗಳೂರು.

ಪ್ರತಿಯನ್ನು:

1. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರವರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.
2. ಕಡತ/ಮು[illegible]